ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕುಂದಾಪುರ

ಒ.ಎಸ್.ನಂಬ್ರಃ 506/2021

ಪಿ.ಡಬ್ಲ್ಯೂ : 1

ದಿನಾಂಕಃ 03-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.
ಮುಂದುವರಿದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಯು.ಎಸ್ ಎಸ್. ಯವರಿಂದ

1. ನಾನು ಚಾಲಕ ಎಂದರೆ ಸರಿ. ನಾನು ಬಾರಿ ವಾಹನಗಳನ್ನು ಚಲಾವಣೆ ಮಾಡುತ್ತೇನೆ. ನಾನು ತೆಕ್ಕಟ್ಟೆ ಶಾಲೆಯಲ್ಲಿ 4 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ರಾಮ ದೇವಾಡಿಗರವರ ಜೀವಿತ ಕಾಲಾವಧಿಯಲ್ಲಿ ಕರಾರಿನಲ್ಲಿ ಹೇಳುವ ದಾರಿ ಹಕ್ಕನ್ನು ಪಂಚಾಯತಿಗೆ ಸೇರಿಸಲು ಪ್ರಯತ್ನ ಪಟ್ಟಿದ್ದು ಉಂಟಾ ಎಂದರೆ ಈಗ ಬೇರೆ ಪಂಚಾಯತ್ ರಸ್ತೆ ಆಗಿದೆ ಎಂದು ನುಡಿಯುತ್ತಾರೆ. ಆ ವಿಚಾರವನ್ನು ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ. ನಾನು ತಹಶೀಲ್ದಾರರಿಗೆ ದೂರು ಕೊಟ್ಟಿದ್ದು ಈ ಪ್ರಕರಣಕ್ಕೆ ಎಂದರೆ ಸರಿ. ತಹಶೀಲ್ದಾರರಿಗೆ ದೂರು ಕೊಟ್ಟ 2 ವರ್ಷದ ನಂತರ ಈ ಪ್ರಕರಣ ಸಲ್ಲಿಸಿರುತ್ತೇನೆ.

2. ನಾನು ಕೊಟ್ಟಂತಹ ದೂರಿಗೆ ತಹಶೀಲ್ದಾರವರು ಯಾವ ರೀತಿಯ ಕ್ರಮ ಕೈಗೊಂಡಿರುತ್ತಾರೆ ಎಂದು ಈವರೆಗೂ ತಿಳಿದುಕೊಂಡಿಲ್ಲ ಎಂದರೆ ಸರಿ. ಎದುರುದಾರರು ದಾರಿ ಬಂದ್ ಮಾಡಿ ಗಲಾಟೆ ಮಾಡುತ್ತಿರುತ್ತಾರೆ ಎಂದು ಕೋಟ ಠಾಣೆಯಲ್ಲಿ ದೂರು ಕೊಟ್ಟಿರುವುದಿಲ್ಲ. ನಾನು ಈ ಪ್ರಕರಣದಲ್ಲಿ ಸರ್ವೆ ನಂಬರ್ 68 ರಲ್ಲಿ ದಾರಿ ಇರುತ್ತದೆ ಎಂದು ಹೇಳಿರುತ್ತೇನೆ. 68 ರ ಯಾವ ಹಿಸ್ಸಾ ನಂಬರ್ ನಲ್ಲಿ ದಾರಿ ಇದೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಸರ್ವೆ ನಂಬರ್ 68/12 ರಲ್ಲಿ ದಾರಿ ಇದೆ ಎಂದು ತೋರಿಸಲು ಯಾವ ದಾಖಲೆ ತೋರಿಸಿದ್ದೀರಾ ಎಂದರೆ ಸಾಕ್ಷಿ ಕರಾರು ಪತ್ರದಲ್ಲಿ ಅವರು ದಾರಿ ಇರುವ ಬಗ್ಗೆ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 68/12 ರಲ್ಲಿ ದಾರಿ ಇದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ. ಸರ್ವೆ ನಂಬರ್ 68/12 ರಲ್ಲಿ ಯಾವುದೇ ದಾರಿ ಇಲ್ಲದೇ ಇರುವುದರಿಂದ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

3. ಶೀನ ದೇವಾಡಿಗರು ನನಗೆ ಬದಲಿ ಹಕ್ಕನ್ನು ಕೊಡುವ ಪೂರ್ವದಲ್ಲಿ ರಾಮ ದೇವಾಡಿಗ ಅಥವಾ ಅವರ ವಾರಿಸುದಾರರ ಮೇಲೆ ಯಾವುದೇ ಸಿವಿಲ್ ವ್ಯಾಜ್ಯ ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿ ಯಾವುದೇ ವ್ಯಾಜ್ಯ ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. ಬದಲಾವಣೆ ಪತ್ರದ ನೋಂದಣಿ ದಿನಾಂಕ ಹಾಗೂ ಸಂಖ್ಯೆಯನ್ನು ನನ್ನ ವಾದ ಪತ್ರ ಹಾಗೂ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ನಾನು ದಾರಿ ಇದೆ ಅಂತ ಹೇಳಿರುವುದು 1998-99 ರಲ್ಲಿ ಕ್ರಯಕ್ಕೆ ಪಡೆದುಕೊಂಡ ಸ್ಥಳಕ್ಕೆ ಎಂದರೆ ಸರಿ.

4. ಸ್ಥಳವನ್ನು ಯಾವ ಉದ್ದೇಶಕ್ಕೆ ಬದಲಾವಣೆ ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿ ಬದಲಾವಣೆ ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ. 1998-99 ರಲ್ಲಿ ನಾವು ಕ್ರಯಕ್ಕೆ ಪಡೆದುಕೊಂಡ ಸ್ವತ್ತನ್ನು ಬದಲಾವಣೆ ಮಾಡಿಕೊಂಡಿಲ್ಲ. ನಾನು ಎಲ್ಲಾ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಯಾವುದು ಅಂತ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಬದಲಾವಣೆ ಪತ್ರ ದಲ್ಲಿ ನಾವು ಬದಲಾವಣೆಗೆ ಕೊಟ್ಟ ಸ್ಥಳದಲ್ಲಾಗಲಿ ಅಥವಾ ಬದಲಾವಣೆ ಪಡೆದುಕೊಂಡ ಸ್ಥಳದಲ್ಲಾಗಲಿ ಯಾವ ಜಾಗದಲ್ಲಿ ಮನೆ ಇದೆ ಎಂದು ತೋರಿಸಲಾಗಿದೆಯಾ ಎಂದರೆ ಸಾಕ್ಷಿ ಮನೆ ಇರುವ ಬಗ್ಗೆ ತೋರಿಸಿರುವುದಿಲ್ಲ ಎಂದು ನುಡಿಯುತ್ತಾರೆ.

5. ಬದಲಾವಣೆ ಪತ್ರ ದಲ್ಲಿ ನಾವು ಬದಲಾವಣೆಗೆ ಕೊಟ್ಟ ಸ್ಥಳಕ್ಕೆ ಯಾರ ಆಸ್ತಿಯ ಮೇಲೆ ದಾರಿ ಇರುತ್ತದೆ ಹಾಗೂ ನಾವು ಬದಲಾವಣೆಗೆ ಪಡೆದುಕೊಂಡ ಸ್ಥಳಕ್ಕೆ ಯಾರ ಆಸ್ತಿಯ ಮೇಲೆ ದಾರಿ ಇರುತ್ತದೆ ಎಂದು ನಮೂದಿಸಲಾಗಿದೆಯಾ ಎಂದರೆ ಸಾಕ್ಷಿ ನಮೂದು ಮಾಡಿಲ್ಲ ಎಂದು ನುಡಿಯುತ್ತಾರೆ. ನಿ.ಪಿ. 5 ಮತ್ತು 6 ರ ಫೋಟೋಗಳು ದಾವಾ ಸ್ವತ್ತಿಗೆ ಸಂಬಂಧಪಟ್ಟವಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಅದು ನಮ್ಮ ಮನೆಗೆ ಹೋಗುವ ದಾರಿ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ನಮ್ಮ ಸ್ಥಳಕ್ಕೆ ಎದುರುದಾರರ ಸ್ಥಳದಲ್ಲಿ ಯಾವುದೇ ದಾರಿ ಇಲ್ಲ ಎಂದರೆ ಸಾಕ್ಷಿ ದಾರಿ ಸ್ಥಳವನ್ನು ನಾನೇ ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹಾಜರು ಪಡಿಸಿದ ಕರಾರು ಪತ್ರವನ್ನು ನಾನೇ ತಯಾರು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ ಹಾಗೂ ಅದು ನೈಜ ಕರಾರು ಪತ್ರವಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಮನೆಗೆ ಹೋಗುವ ದಾರಿಗೆ ಸಂಬಂಧಪಟ್ಟಂತೆ ನಾನು ಕ್ರಯ ಮಾಡಿಕೊಂಡಿರುವುದಿಲ್ಲ ಹಾಗೂ ಆ ರೀತಿ ಯಾವುದೇ ಜಾಗ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಕೇಳುವ ದಾರಿಯ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ